ನಗರಸಭೆಗಳಿಗೆ ಹೊಸ ಬಡಾವಣೆಗಳನ್ನು ಸೇರಿಸುವ ಕುರಿತು

297 (239) ಶ್ರೀ ನಾರಾಯಣಸ್ವಾಮಿ. ಎ. (ಆನೇಕಲ್) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಜಿಲ್ಲೆಯ ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ನಗರಸಭೆಗಳು ಇರುವುದು ಎಷ್ಟು ಅವು ಯಾವುವು;

ಆ) ಈ ನಗರಸಭೆಗಳ ರಚನೆಯ ನಂತರ ನಗರ ಸಭೆಗಳಿಗೆ ಹೊಸ ಬಡಾವಣೆಗಳನ್ನು ಸೇರಿಸಲು ಸರ್ಕಾರಕ್ಕೆ ಮನವಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ ಸದರಿ ನಗರಸಭೆಗಳಿಗೆ ಹೊಸ ಬಡಾವಣೆ ಸೇರಿಸಲು ಅಥವಾ ನಗರಸಭೆ ರಚಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 7 ನಗರಸಭೆಗಳು ಇರುತ್ತವೆ. ಅವುಗಳು

1. ಮಹಾದೇವಪುರ
2. ಕೃಷ್ಣರಾಜಪುರ
3. ಬ್ಯಾಟರಾಯನಪುರ
4. ಬೊಮ್ಮನಹಳ್ಳಿ
5. ಪಟ್ಟಣಗೆರೆ
6. ದಾಸರಹಳ್ಳಿ
7. ಯಲಹಂಕ

ಆ) ಬಂದಿದೆ

ಇ) ನಗರಸಭೆಗಳ ಗಡಿ ವಿಸ್ತರಣೆ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಬರುವ ಪ್ರಸ್ತಾವನೆಗಳನ್ನು ಪ್ರಸ್ತುತ ಜನಗಣತಿ ನಿರ್ದೇಶನಾಲಯದ ನಿರ್ಬಂಧ ಇರುವ ಕಾರಣ ದಿನಾಂಕ : 31-03-2001ರ ನಂತರ ಪರಿಶೀಲಿಸಲಾಗುವುದು.

ಮಾರ್ಕೆಟಿಂಗ್ ಡೆವಲಪ್‌ಮೆಂಟ್ ಅಸಿಸ್ಟೆನ್ಸ್

299 (563) ಶ್ರೀ ಎಸ್. ಟಿ. ನಂಜಯ್ಯನಮಠ್ (ಗುಳೇದಗುಡ್ಡ) : ಮಾನ್ಯ ರೇಷ್ಮೆ ಮತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಾಕಾರ ಸಂಘಗಳು ಮತ್ತು ಕೆ.ಹೆಚ್.ಡಿ.ಸಿ.ಯಲ್ಲಿ ಮಾರಾಟವಾಗುವ ಬಟ್ಟೆಗಳಿಗೆ ಮಾರ್ಕೆಟಿಂಗ್ ಡೆವಲಪ್‌ಮೆಂಟ್ ಅಸಿಸ್ಟೆನ್ಸ್ ಯೋಜನೆ ಸರ್ಕಾರ ಮುಂದುವರಿಸಿದೆಯೇ?

ಆ) ಹಾಗಿದ್ದಲ್ಲಿ ಶೇಕಡ ಎಷ್ಟು?

ಇ) ಇದರಲ್ಲಿ ರಾಜ್ಯ ಸರ್ಕಾರದ ಪಾಲು ಎಷ್ಟು?